# ನಾದದ ನದಿಯಲ್ಲಿ ತಲೆಮಾರುಗಳ ಪಯಣ

ಹಿಂದೂಸ್ತಾನಿ ಸಂಗೀತ ಪರಂಪರೆಯ ಸಿತಾರ್ ವಾದನಕ್ಕೆ ಸಂಪೂರ್ಣ ಸಮರ್ಪಿಸಿಕೊಂಡ ಇಟಾವಾ ಘರಾಣದ ಮೇರುವಾದಕ ಉಸ್ತಾದ್ ಶಾಹೀದ್ ಪರ್ವೇಜ್ ಖಾನ್. ಬೆಂಗಳೂರಿನಲ್ಲಿ ಈಚೆಗೆ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉಸ್ತಾದ್‌ಜಿ, ತಮ್ಮ ಸಂಗೀತಯಾನದ ಬಗ್ಗೆ ಮಾತನಾಡಿದ್ದಾರೆ.

■ ಉಮಾ ಅನಂತ್



## ಶಾಹೀದ್ ಪರ್ವೇಜ್ ಖಾನ್ ಸಂದರ್ಶನ

◆ **ಸಿತಾರ್, ಕೊಳಲಿನಂತೆಯೇ 'ಗಾಯಕಿ ಅಂಗ' ಪ್ರಧಾನ ವಾದ್ಯ. ವಿಶಿಷ್ಟ ಶೈಲಿಯ ನುಡಿಸಾಣಿಕೆಯಿಂದ ದೇಶ–ವಿದೇಶಗಳಲ್ಲಿ ಮನೆಮಾತಾದವರು ನೀವು. ನಿಮ್ಮ ವಾದನ ಶೈಲಿಯ ವೈಶಿಷ್ಟ್ಯವೇನು?**

ನಮ್ಮದು ಇಟಾವಾ ಘರಾಣ. ಇದೊಂದು ವಿಶಿಷ್ಟ ಪರಂಪರೆ. ಸಿತಾರ್‌ನಲ್ಲಿ ಯಾವುದೇ ರಾಗ ನುಡಿಸಲಿ, ಅದು ಕೇಳುಗರಿಗೆ ಗಾಯನ ಕೇಳಿದಂತೆ ಭಾಸವಾಗಬೇಕು, ಸುಲಭದಲ್ಲಿ ಅರ್ಥವಾಗಬೇಕು, ಮನಸ್ಸಿಗೆ ನಾಟಬೇಕು, ಹೃದಯ ತಟ್ಟಬೇಕು. ಹೀಗಾಗಿಯೇ ಸಿತಾರ್ 'ಗಾಯಕಿ ಪ್ರಧಾನ' ವಾದ್ಯ. ಇಲ್ಲಿ ಗಾಯನಕ್ಕೂ ವಾದನಕ್ಕೂ ಬಹಳಷ್ಟು ಸಾಮ್ಯತೆ ಇರುತ್ತದೆ. ತಂತಿಗಳನ್ನು ಮೀಟುತ್ತಾ ಸ್ವರಮಾಧುರ್ಯ ಹೊಮ್ಮಿಸಿದಾಗ ವಾದಕನಿಗೆ ತೃಪ್ತಿ ದೊರೆತರೆ ಕೇಳುಗನಲ್ಲಿ ಸಂಗೀತ ಸವಿದ ಧನ್ಯತೆಯ ಭಾವ ಮೂಡಬೇಕು. ಅದು ರಾಗ ಮಾರ್ವಾವೇ ಆಗಿರಲಿ, ಪೂರಿಯ ಧನಾಶ್ರೀಯೇ ಇರಲಿ, ತಂತಿಯಲ್ಲಿ ಸ್ವರ ಹೊಮ್ಮಿದಾಗ ಅದು ಗಾಯನದಂತೆಯೇ ಇರಬೇಕು. ಇದು ವಾದಕನ ಮನೋಧರ್ಮವನ್ನೂ ಅವಲಂಬಿಸಿದೆ. ನಮ್ಮ ಮನೋಧರ್ಮದ ಹಾಗೆಯೇ ತಂತಿ ವಾದ್ಯದಲ್ಲಿ ನಾದಾನುಸಂಧಾನವಾಗುತ್ತದೆ. ನನ್ನ ನುಡಿಸಾಣಿಕೆ ಮಟ್ಟಿಗೆ ಹೇಳುವುದಾದರೆ ಹೆಚ್ಚಿನವು ನಮ್ಮ ತಂದೆ, ತಾತ ಸಂಯೋಜನೆ ಮಾಡಿರುವ ರಾಗಗಳನ್ನೇ ವಿದ್ವತ್ಪೂರ್ಣವಾಗಿ ಪ್ರಸ್ತುತಪಡಿಸುವ ಪ್ರಯತ್ನ ಮಾಡುವುದರಲ್ಲಿ ಯಶ ಸಾಧಿಸಿದ್ದೇನೆಂದೇ ಹೇಳಬಹುದು.

◆ **ಸಿತಾರ್ ವಾದನದಲ್ಲಿ 'ಜೋಡ್–ಜಾಲಾ'ಗಳೇ ಪ್ರಧಾನ ಆಕರ್ಷಣೆ. ನಿಮ್ಮ ನುಡಿಸಾಣಿಕೆಯ ಜೋಡ್–ಜಾಲಾ ಕೇಳುವುದೇ ಹಬ್ಬ. ರಾಗವನ್ನು ಹೂವಿನಂತೆ ಅರಳಿಸುವ ಪರಿಗೆ ತಲೆದೂಗದವರೇ ಇಲ್ಲ. ಇದರ ಗುಟ್ಟೇನು?**

ನನ್ನ ನುಡಿಸಾಣಿಕೆಯ ಜೋಡ್–ಜಾಲಾದಲ್ಲಿ ಬಹುತೇಕ ಭಾಗ 'ಆನ್ ದಿ ಸ್ಪಾಟ್'. ಇಲ್ಲಿ ನನ್ನ ಮನೋಧರ್ಮ ಹೆಚ್ಚು ಕೆಲಸ ಮಾಡುತ್ತದೆ. ಇಲ್ಲಿ ಮೊದಲಿಗೆ ಆಲಾಪ್ ವಿತ್ ರಿದಮ್. ಆಮೇಲಿನ ಭಾಗವೂ ಯಾವುದೂ ಪೂರ್ವ ನಿರ್ಧಾರಿತ ಅಲ್ಲ. ಜೋಡ್ ಆದ ಮೇಲೆ ಬರುವ ಜಾಲಾ ಭಾಗ ಮಾತ್ರ ಸ್ವಲ್ಪ ಪೂರ್ವ ನಿರ್ಧಾರಿತವಾದದ್ದು. ವೇದಿಕೆಯಲ್ಲಿ 'ಸ್ಪಾಂಟೇನಿಯಸ್' ಆಗಿ ನುಡಿಸುವುದೇ ನನಗೆ ಇಷ್ಟ. ಇದುವೇ ಕೇಳುಗರಿಗೆ ಮಹದಾನಂದ ಕೊಡುತ್ತದೆ ಎನ್ನುವುದು ನನ್ನ ಭಾವನೆ. ರಾಗವನ್ನು ದಳದಳವಾಗಿ ಅರಳಿಸಿದಾಗ ಜನರ ಮನಸ್ಸೂ ಅರಳುತ್ತದೆ. ಇದೇ ಒಬ್ಬ ವಾದಕನಿಗೆ ಸಿಗುವ ನಿಜವಾದ ಆತ್ಮತೃಪ್ತಿ. ನನ್ನ ಕಛೇರಿಗಳಲ್ಲಿ ಆಲಾಪ ಮತ್ತು ಜೋಡ್ ಎರಡೂ ನನ್ನದೇ ಕ್ರಿಯೇಷನ್. ಜಾಲಾ ಮಾತ್ರ ನನ್ನ ತಾತ ರಚಿಸಿದ್ದನ್ನು ನನ್ನ ಮನೋಧರ್ಮದಂತೆ ನುಡಿಸುತ್ತೇನೆ, ಇಲ್ಲಿ ಕಲಾವಿದನ ನೈಪುಣ್ಯದ ಪ್ರದರ್ಶನವಾಗುತ್ತದೆ. ರಾಗ ವಿಸ್ತಾರದ ಬಗೆಗಿನ ಪಾಂಡಿತ್ಯ ಅನಾವರಣವಾಗುವುದು ಇಲ್ಲಿಯೇ.

ಸುಪ್ರಸಿದ್ಧ ರಾಗಗಳಾದ ಮಾರೊಬಿಹಾಗ್, ಶಿವರಂಜಿನಿ, ಪೂರಿಯ ಕಲ್ಯಾಣ್, ಯಮನ್, ಬಿಹಾಗ್ ಮುಂತಾದವು ನನಗೆ ಬಹಳ ಇಷ್ಟ. ಈ ಎಲ್ಲ ರಾಗಗಳನ್ನು ಸಿತಾರ್‌ನಲ್ಲಿ ಲೀಲಾಜಾಲವಾಗಿ ನುಡಿಸಬಹುದು. ಗಾಯನದಂತೆಯೇ ವಾದನವೂ ಇರುವುದರಿಂದ ಇಂಥ ರಾಗಗಳು ಕೇಳುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ.

◆ **ತಲೆಮಾರಿನ ಹಾಗೂ ಪರಂಪರೆಯ ಸಂಗೀತಕ್ಕೆ ನಿಮ್ಮ ಕುಟುಂಬ ಹೆಸರಾಗಿದೆ. ತಂದೆಯ ಬಳುವಳಿಯನ್ನು ನೀವು ಮುಂದುವರಿಸಿಕೊಂಡು ಬಂದ ಬಗೆ ಹೇಗೆ?**

ಸಂಗೀತ ಎಂದರೆ ಅದು ತಪಸ್ಸು, ಧ್ಯಾನ. ನಮ್ಮದು ಏಳು ತಲೆಮಾರುಗಳ ಸಂಗೀತ. ತಂದೆಯೇ ನನ್ನ ಗುರು. ಕಲಿಸುವುದರಲ್ಲಿ ಅವರು ಕಟ್ಟುನಿಟ್ಟು. ನಾನು ಮೂರು ವರ್ಷ ಇರುವಾಗಲೇ ಸಿತಾರ್‌ನತ್ತ ಆಕರ್ಷಿತನಾದೆ. ನಾಲ್ಕನೇ ವಯಸ್ಸಿಗೇ ಸಿತಾರ್ ಅನ್ನು ಸರಿಯಾಗಿ ನುಡಿಸುವ ಕ್ರಮವನ್ನು ಕರಗತ ಮಾಡಿಕೊಂಡೆ. ನಿತ್ಯವೂ ಐದಾರು ಗಂಟೆ ರಿಯಾಜ್ ಮಾಡುವುದು ಕಡ್ಡಾಯವಾಗಿತ್ತು. ತಂದೆ ಹಾಗೂ ತಾತ ನನಗೆ ಸಂಗೀತದ ಪರಿಪೂರ್ಣ ಜ್ಞಾನವನ್ನು ಧಾರೆಯೆರೆದಿದ್ದರು. ಹೀಗಾಗಿ ಪೂರ್ವಜರ ಸಂಗೀತ ಪರಂಪರೆ ಸಂಪ್ರದಾಯಗಳನ್ನು ನಾನು ಸದಾ ಗೌರವಿಸುತ್ತೇನೆ. ಸಿತಾರ್ ಪರಂಪರೆ ಹಾಗೂ ನಮ್ಮ ಘರಾಣೆಯನ್ನು ಉಳಿಸುವುದಕ್ಕಾಗಿ ಹಲವಾರು ಶಿಷ್ಯಂದಿರನ್ನು ತಯಾರು ಮಾಡಿದ್ದೇನೆ.

ಪ್ರತಿಕ್ರಿಯಿಸಿ: feedback@sudha.co.in

### ಗಾಯನ, ತಬಲಾದಲ್ಲೂ ಪರಿಣತಿ

ಭಾರತೀಯ ಸಂಗೀತದ ಸಿತಾರ್ ವಾದನದಲ್ಲಿ ಶಾಹೀದ್ ಪರ್ವೇಜ್ ಬಹುದೊಡ್ಡ ಹೆಸರು. ಶಾಹೀದ್ ಮುಂಬಯಿಯಲ್ಲಿ (ಅಕ್ಟೋಬರ್ 14, 1954) ಸಂಗೀತ ಮನೆತನದಲ್ಲಿ ಜನಿಸಿದವರು. ತಂದೆ ಅಜೀಜ್ ಖಾನ್ ಅವರಿಂದಲೇ ಸಿತಾರ್ ಕಲಿತವರು. ಸಿತಾರ್ ಕಲಿಕೆಗೂ ಮುನ್ನ ಗಾಯನ, ತಬಲಾದಲ್ಲೂ ಪ್ರಾಥಮಿಕ ತರಬೇತಿ ಪಡೆದುಕೊಂಡರು. ಇವರ ತಾತ ವಾಹಿದ್ ಖಾನ್ ಸಿತಾರ್ ಹಾಗೂ ಸುರ್‌ಬಹಾರ್ ವಾದಕರಾಗಿದ್ದವರು.

ಪ್ರಪಂಚದಾದ್ಯಂತ ಪ್ರತಿಷ್ಠಿತ ವೇದಿಕೆಗಳಲ್ಲಿ ಸಿತಾರ್ ನುಡಿಸಿರುವ ಇವರು, ಪದ್ಮಶ್ರೀ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಸುರ್ ಶೃಂಗಾರ್ ಸಮ್ಮಾನ್, ಕುಮಾರ್ ಗಂಧರ್ವ ಪ್ರಶಸ್ತಿಗಳಿಗೆ ಭಾಜನರು.